# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ಕಾರ್ಯಾಲಯ,

## ನಂಜನಗೂಡು

**ಸಿ.ಸಿ. ನಂ.1233-2016** **ಡಿ .ಡಬ್ಲುಃ 1**

| | |
|---|---|
| ಸಾಕ್ಷಿದಾರರ ಹೆಸರು<br>ವಯಸ್ಸು<br>ಉದ್ಯೋಗ<br>ವಾಸ್ತವ್ಯ | ದಿನೇಶ್.ಬಿ.ಎಸ್ ಬಿನ್ ಲೇ.ಶಾಂತಪ್ಪ<br>40 ವರ್ಷ<br>ಪತ್ರಿಕಾ ಪ್ರಸರಣ ಪ್ರತಿನಿಧಿ<br>ಬಿಳಿಗೆರೆ ಗ್ರಾಮ ಮತ್ತು ಅಂಚೆ, ಮಡಿಕೇರಿ ಜಿಲ್ಲೆ. |
| | **ಸತ್ಯ ಪ್ರತಿಜ್ಞೆಯ** ಮೇರೆಗೆ **ದಿನಾಂಕ** 04-07-2022. |

**ಮುಂದುವರೆದ ಮುಖ್ಯ ವಿಚಾರಣೆಃ ಶ್ರೀ ಎಂ.ಕೆ.ಬಿ ವಕೀಲರಿಂದಃ**

ಅಸಲು ದಾವಾ ಸಂ.74/2017 ರ ವಾದ ಪತ್ರದ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ನಿಡಿ-6 ಎಂದು, ಅಸಲು ದಾವಾ ಸಂ.74/2017 ರ ಪ್ರತಿವಾದ ಪತ್ರದ ಬೆರಳಚ್ಚು ಪ್ರತಿ ಮತ್ತು ಬರವಣಿಗೆ ಪ್ರತಿಯ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ಒಟ್ಟಾರೆಯಾಗಿ ನಿಡಿ-7 ಎಂದು, ಅಸಲು ದಾವಾ ಸಂ.74/2017 ರ ಆರ್ಡರ್ ಶೀಟ್ ನ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ನಿಡಿ-8 ಎಂದು, ಎಸ್.ಸಿ.ನಂ.03/2020 ರ ವಾದ ಪತ್ರದ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ನಿಡಿ-9 ಎಂದು, ಎಸ್.ಸಿ.ನಂ.03/2020 ರ ತೀರ್ಪಿನ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ನಿಡಿ-10 ಎಂದು, ಎಸ್.ಸಿ.ನಂ.03/2020 ರ ಡಿಕ್ರಿಯ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ನಿಡಿ-11 ಎಂದು, ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿದ್ದು ನಿಡಿ-12 ರಿಂದ 14 ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಪಿರ್ಯಾದಿ ಪರ ಶ್ರೀ.ಎನ್.ಯು.ವಕೀಲರಿಂದ**

ನಾನು 2001 ರಿಂದ 2006 ನೇ ಇಸವಿಯವರೆಗೆ ಷತ್ರಿಕಾ ಮಾಧ್ಯಮದಲ್ಲಿ ಪ್ರಸರಣ ಪ್ರತಿನಿಧಿಯಾಗಿ ಕೆಲಸ ಮಾಡಿರುತ್ತೇನೆ. ಪಿರ್ಯಾದಿ ನಂಜನಗೂಡಿನ ಸಂಯುಕ್ತ ಕರ್ನಾಟಕ ಷತ್ರಿಕೆಯ ಏಜೆಂಟ್ ಆಗಿದ್ದು ಅವರು ನನಗೆ 2001 ರಿಂದ ಪರಿಚಿತರು. ಪಿರ್ಯಾದಿದಾರರು ಸಂಯುಕ್ತ ಕರ್ನಾಟಕ ಷತ್ರಿಕೆಯ ಏಜೆಂಟ್ ಆಗಿ ಕೆಲಸ ಮಾಡುವುದರಿ ಜೊತೆಗೆ ವ್ಯವಸಾಯ ಗಾರರಾಗಿದ್ದು ವ್ಯವಸಾಯದ ಜಮೀನುಗಳನ್ನು ಹೊಂದಿದ್ದರು ಎಂದರೆ ಸರಿಯಲ್ಲ. ಪಿರ್ಯಾದಿದಾರರು ನಿವೇಶನಗಳ ಡೆವಲಪರ್ ಅಲ್ಲ. ನಾನು ಹೇಳುವಂತೆ 2010 ರಲ್ಲಿ

ಪಿರ್ಯಾದಿದಾರರು ನನಗೆ ಹೌಸಿಂಗ್ ಬೋರ್ಡ್ ನಲ್ಲಿ ನಿವೇಶನ ಕೊಡಿಸುವುದಾಗಿ ತಿಳಿಸಿರಲಿಲ್ಲ ಎಂದರೆ ಸರಿಯಲ್ಲ.

2. ನಾನು ಮತ್ತು ಪಿರ್ಯಾದಿದಾರರು ಈಗ ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿ ಕೆಲಸ ಮಾಡುತ್ತಿಲ್ಲ. ನಾನು 2010 ಡಿಸೆಂಬರ್ ನಂತರ ಸಂಯುಕ್ತ ಕರ್ನಾಟಕ ಪತ್ರಿಕೆಯಿಂದ ಹೊರಬಂದಿರುತ್ತೇನೆ. ನನಗೆ ವಿಜಯ ಕರ್ನಾಟಕ ಪತ್ರಿಕೆಯಲ್ಲಿ ಹುದ್ದೇಗೆ ಆಯ್ಕೆ ಆದ ಕಾರಣ ಸಂಯುಕ್ತ ಕರ್ನಾಟಕ ಪತ್ರಿಕೆಲ್ಲಿನ ನನ್ನ ಕೆಲಸಕ್ಕೆ ರಾಜಿ ನಾಮೆ ನೀಡಿರುತ್ತೇನೆ. ಪತ್ರಿಕಾ ಕೆಲಸಕ್ಕೆ ನನಗೆ ಒಂದು ವಾಹನದ ಅವಶ್ಯಕತೆ ಇತ್ತು ಎಂದರೆ ಸರಿಯಲ್ಲ.

3. ದಿ.25-12-2013 ರಂದು ವಾಹನ ಖರೀದಿಸಲು ನಾನು ಪಿರ್ಯಾದಿದಾರರಿಂದ ರೂ.2,50,000/- ಗಳನ್ನು ಸಾಲವಾಗಿ ಪಡೆದುಕೊಂಡು ನಿಪಿ-1 ಚೆಕ್ಕನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ಹೌಸಿಂಗ್ ಬೋರ್ಡ್ ನಲ್ಲಿ ನಿವೇಶನ ಕೊಡಿಸುವುದಕ್ಕೆ ಸಂಬಂಧಿಸಿದಂತೆ ಖಾಲಿ ಚೆಕ್ಕನ್ನು ನೀಡಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಪಿರ್ಯಾದಿದಾರರಿಂದ ವಾಹನ ಖರೀದಿಸಲು ಹಣ ಪಡೆದುಕೊಂಡು ಚೆಕ್ಕನ್ನು ನೀಡಿದ್ದರು, ಹೌಸಿಂಗ್ ಬೋರ್ಡ್ ನಲ್ಲಿ ನಿವೇಶನ ಕೊಡಿಸುವುದಕ್ಕೆ ಚೆಕ್ ನೀಡಿದ್ದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-4 ಕ್ಕೆ ನಾನು ಸುಳ್ಳು ಪ್ರತ್ಯುತ್ತರವನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ.

4. ಪಿರ್ಯಾದಿದಾರರು ನನ್ನ ಮಾವನವರಾದ ಚೆನ್ನಪ್ಪರವರಿಂದ ರೂ.2,00,000/- ಗಳನ್ನು ಸಾಲವಾಗಿ ಪಡೆದುಕೊಂಡು ಸಾಲದ ಬಾಬ್ತು ನನ್ನ ಮಾವನವರ ಖಾತೆಗೆ ತಿಂಗಳಿಗೆ ರೂ.1,000/- ರೂ.2,000/- ಗಳಂತೆ ರೂ.25,000/- ಗಳನ್ನು ಮಾತ್ರ ಪಾವತಿ ಮಾಡಿರುತ್ತಾರೆ ಎಂದು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿದ್ದು, ಸದರಿ ವ್ಯವಹಾರಕ್ಕೂ ಈ ಪ್ರಕಣಕ್ಕೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

5. ನನ್ನ ಪತ್ನಿ ಪೊಲೀಸ್ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಾರೆ ಎಂದರೆ ಸರಿ. ನಾನು ಪಿರ್ಯಾದಿದಾರರಿಗೆ ದಿ.25-12-2013 ರಂದು ಚೆಕ್ ನೀಡಿದ್ದರು ಸಹ ದಿ.31-10-2013 ರಲ್ಲೇ ಚೆಕ್ಕು ಕಳೆದು ಹೋಗಿದೆ ಎಂದು ಸೃಷ್ಟಿಸಿ ನಿಡಿ-1 ರಂತೆ ಬ್ಯಾಂಕಿನವರಿಗೆ ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಅಕ್ಟೋಬರ್-2010 ರಲ್ಲಿ ಪಿರ್ಯಾದಿಗೆ ಹೌಸಿಂಗ್ ಬೋರ್ಡ್ ನಿವೇಶನದ ಸಂಬಂಧ ಚೆಕ್ ನೀಡಿರುತ್ತೇನೆ ಎಂದು ಹಾಗೂ ದಿ.31-10-2013 ರಂದು ಚೆಕ್ಕು ಕಳೆದು ಹೋಗಿದೆ ಎರಡು ಪ್ರತಿಪಾದನೆಯನ್ನು ತೆಗೆದುಕೊಂಡಿದ್ದು, ಸದರಿ ಎರಡು ಪ್ರತಿಪಾದನೆಗಳ ಪೈಕಿ ಯಾವುದು ನಿಜ ಎಂಬ ಪ್ರಶ್ನೆಗೆ ಸಾಕ್ಷಿ ದಿ.31-10-2013 ರಂದು ಚೆಕ್ಕು ಕಳೆದು ಹೋಗಿದೆ ಎಂಬ ಪ್ರತಿಪಾದನೆಯು ಸತ್ಯವಾಗಿರುತ್ತದೆ ಎಂದು ನುಡಿಯುತ್ತಾರೆ. ನಿಡಿ-2 ರಲ್ಲಿ ನಿಪಿ-1 ಚೆಕ್ಕಿನ ಬಗ್ಗೆ ನಮೂದು ಇರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಅದೇ ಬೇರೆ ಈ ಪ್ರಕರಣವೇ ಬೇರೆ ಎಂದು ನುಡಿಯುತ್ತಾರೆ.

6. ನಾನು ಪಿರ್ಯಾದಿದಾರರ ವಿರುದ್ಧ ಚೆಕ್ಕನ್ನು ದುರುಪಯೋಗಪಡಿಸಿಕೊಂಡಿದ್ದಾರೆ ಎಂದು ಮಡಿಕೇರಿ ನ್ಯಾಯಾಲಯದಲ್ಲಿ ಭಾರತೀಯ ದಂಡ ಸಂಹಿತೆ ಕಲಂ.406, 420,417, 465

ಮತ್ತು 468 ರ ಅಡಿ ಖಾಸಗಿ ಪಿರ್ಯಾದನ್ನು ಸಲ್ಲಿಸಿದ್ದು, ಸದರಿ ಖಾಸಗಿ ಪಿರ್ಯಾದು ಈಗ ಹಾಲಿ ಸಿ.ಸಿ.ನಂ.406/2019 ಎಂದು ಆಗಿರುತ್ತದೆ ಎಂದರೆ ಸರಿ. ನಾನು ಸದರಿ ಪ್ರಕರಣವನ್ನು ಈ ಪ್ರಕರಣ ವನ್ನು ಪಿರ್ಯಾದಿದಾರರು ದಾಖಲಿಸಿದ ನಂತರ ದಾಖಲಿಸಿರುತ್ತೇನೆ ಎಂದರೆ ಸರಿ. ನಾನು ಪಿರ್ಯಾದಿದಾರರ ವಿರುದ್ದ ಸಲ್ಲಿಸಿದ್ದ ಸಿ.ಸಿ.406/2019 ರ ವಿರುದ್ದ ಪಿರ್ಯಾದಿದಾರರು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಿದ್ದು ಸದರಿ ಮೇಲ್ಮನವಿ ಆದೇಶದಂತೆ ನಾನು ಪಿರ್ಯಾದಿದಾರರು ವಿರುದ್ದ ಸಲ್ಲಿಸಿದ್ದ ಸಿ.ಸಿ.406/2019 ರ ಪ್ರಕರಣವು ಅಸಿಂಧುವಾಗಿರುತ್ತದೆ ಎಂದರೆ ಸರಿ ಎಂದು ಒಪ್ಪಿಕೊಂಡಿರುತ್ತಾರೆ.

7. ಲೇಟ್ ತಮ್ಮಯ್ಯಪ್ಪ ಮತ್ತು ಗೌರಮ್ಮ ಎಂದರೆ ಪಿರ್ಯಾದಿದಾರರ ತಂದೆ-ತಾಯಿ ಎಂದರೆ ಸರಿ. ನಿಡಿ-13 ಮತ್ತು 14 ರಲ್ಲಿ ಪಿರ್ಯಾದಿದಾರರು ಹೆಸರು ಪಹಣಿಯಲ್ಲಿ ನಮೂದು ಆಗಿರುತ್ತದೆ ಎಂದರೆ ಸರಿ. ಸಾಕ್ಷಿ ಮಂದುವರೆದು 2019 ರ ನಂತರ ನಮೂದು ಆಗಿರುತ್ತದೆ ಎಂದು ನುಡಿಯುತ್ತಾರೆ. ನಿಡಿ-10 ಪ್ರಕರಣವನ್ನು ಪಿರ್ಯಾದಿದಾರರ ವಿರುದ್ದ ದಾಖಲಿಸುವ ಮುನ್ನ ಪಿರ್ಯಾದಿದಾರರು ಎನ್.ಶ್ರೀಕಂಠಪ್ರಸಾದ್ ರವರಿಗೆ ಪ್ರತ್ಯುತ್ತರವನ್ನು ನೀಡಿದ ವಿಚಾರ ನನಗೆ ಗೊತ್ತಿಲ್ಲ. ಈ ಪ್ರಕರಣದ ಬಗ್ಗೆ ನನಗೆ ವಾಸ್ತವಾಂಶ ತಿಳಿದಿದ್ದರು ಸಹ ನಾನು ಪಿರ್ಯಾದಿದಾರರಿಗೆ ಹಣ ನೀಡುವ ಭಾಧ್ಯತೆಯಿಂದ ತಪ್ಪಿಸಿಕೊಳ್ಳುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/-**

**2 ನೇ ಕಿ.ಪ್ರ.ದ. ನ್ಯಾ ದಂ. ನಂಜನಗೂಡು**